ಗೊಳಿಸಬೇಕೆಂದು ಮಂಗಳೂರು ಮಹಾನಗರ ಪಾಲಿಕೆಯ ಸರ್ವ ಸಮ್ಮತಿಯ ನಿರ್ಣಯವು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಡ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ಸುಪ್ರಿಂಕೋರ್ಟಿನ ಆದೇಶದಂತೆ ತಕ್ಷಣ ಕ್ರಮಕೈಗೊಳ್ಳುವುದೇ?

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):

ಅ) ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ.

(2) ವರದಿಯನ್ನು ಮಂಡಿಸುವುದು:

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ): 1996-97 ಮತ್ತು 1997-98ನೇ ಸಾಲಿನಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮ ಮತ್ತು ಅವುಗಳ ಅನುಷ್ಠಾನದ ಬಗೆಗಿನ ಇಪ್ಪತ್ತನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಯಿತು.

(3) ಅರ್ಜಿಗಳನ್ನು ಒಪ್ಪಿಸುವುದು:

ಶ್ರೀ ಮಂಜುನಾಥ್ ಸಿ.ಕುನ್ನೂರು (ಶಿಗ್ಗಾಂವ್): ಅಧ್ಯಕ್ಷರೆ, ಶಿಗ್ಗಾಂವ್ ತಾಲ್ಲೂಕು ಬಂಕಾಪುರದಲ್ಲಿರುವ ಸರ್ಕಾರಿ ಪದವಿ ಕಾಲೇಜು ಕಟ್ಟಡಕ್ಕೆ ಸರ್ಕಾರದಿಂದ ಅನುದಾನ ಮಂಜೂರಾತಿ ಬಗ್ಗೆ ಕೋರಿ ಅಲ್ಲಿನ ನಾಗರೀಕರು ಬರೆದಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅರ್ಜಿಯನ್ನು ಒಪ್ಪಿಸಲಾಯಿತು.

(4) ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: (ಅ) ಮಹಾರಾಷ್ಟ್ರದಿಂದ ವೇದಗಂಗಾ ನದಿಗೆ ನೀರು ಬಿಡುವುದರ ಬಗ್ಗೆ

+ ಶ್ರೀ ನಾಯಕ ಚಂದ್ರಶೇಖರ ಸದಾಶಿವ (ಗೋಕಾಕ್): ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವೇದಂಗಂಗಾ ಮತ್ತು ದೂದಗಂಗಾಕ್ಕೆ ನೀರು ಬಿಡುವಂಥ ಪ್ರಶ್ನೆ. ಈಗಾಗಲೇ ದೂದಗಂಗಾಕ್ಕೆ ಮಹಾರಾಷ್ಟದವರು ಫ್ರೀಯಾಗಿ

ನೀರನ್ನು ಬಿಡುತ್ತಿದ್ದಾರೆ. ಆದರೆ ವೇದಂಗಂಗಾ ನದಿಗೆ ಮಹಾರಾಷ್ಟ್ರದ ಚಿಕ್ಕಲಿ ಎನ್ನುವ ಜಾಗದಲ್ಲಿ ಒಂದು ಡ್ಯಾಮ್ ಕಟ್ಟಿ ದೂದಗಂಗಾ ನದಿಯಿಂದ ವೇದಗಂಗಾ ನದಿಗೆ ಕೆನಾಲ್ ಮೂಲಕ ಡೈವರ್ಟ್ ಮಾಡುತ್ತಿದ್ದಾರೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ.ಮಾಮನಿ) ಪೀಠವನ್ನು ಅಲಂಕರಿಸಿದರು)

ಇಂತಹ ಸಂದರ್ಭದಲ್ಲಿ ಆ ಚಿಕ್ಲಿ ಡ್ಯಾಮ್ ತುಂಬುವವರೆಗೆ ಈ ದೂದ್ ಗಂಗಾ ನದಿ ಬತ್ತಿ ಹೋಗಿ ಬಿಡುತ್ತದೆ. ಇಂತಹ ಪ್ರಸಂಗದೊಳಗೆ ಆ ಕೆಳಗೆ ಇದ್ದಂಥ ರೈತರಿಗೆ, ಕೆಳಗೆ ಇದ್ದಂಥ ಪಟ್ಟಣಗಳಿಗೆ ಕುಡಿಯಲಿಕ್ಕೆ ನೀರು ಇಲ್ಲ, ನೀರಾವರಿಗೂ ನೀರು ಇಲ್ಲವೆನ್ನುವಂಥ ಪ್ರಸಂಗ ಇಲ್ಲಿ ಒದಗಿ ಬಂದಿದೆ. ಈ ಚಿಕ್ಲಿ ಎನ್ನುವಂಥ ಮಹಾರಾಷ್ಟ್ರದ ಡ್ಯಾಮ್‌ದಿಂದ ನಮ್ಮ ಕರ್ನಾಟಕ ಸರಕಾರ ಒಂದು ಕಾಲುವೆಯನ್ನು ಪ್ರಾರಂಭ ಮಾಡಿದೆ. ಆ ಕಾಲುವೆಯ ಮುಖಾಂತರ ಕರ್ನಾಟಕಕ್ಕೆ ನೀರು ತೆಗೆದುಕೊಳ್ಳಬೇಕೆನ್ನುವ ಒಪ್ಪಂದ ಇನ್ನೂ ಆಗಿಲ್ಲ. ಆದರೂ ಕೆನಾಲ್ ವರ್ಕ್ ಪ್ರಾರಂಭವಾಗಿದೆ. ಈಗಿರುವಂಥ ಪ್ರಶ್ನೆ ಏನೆಂದರೆ, ಈ ಕೆನಾಲ್ ಬಗ್ಗೆ ಮಹಾರಾಷ್ಟ್ರ ರಾಜ್ಯದೊಡನೆ ಒಪ್ಪಂದವೂ ಆಗಿಲ್ಲ, ಕೊಡಬೇಕಾದ 3 ಕೋಟಿ ರೂಪಾಯಿಗಳನ್ನೂ ಕೊಟ್ಟಿಲ್ಲ. ಆದರೂ ಸಹ ಈ ಕೆನಾಲ್ ವರ್ಕ್‌ನ್ನು ಶುರು ಮಾಡಿದ್ದಾರೆ. ದೂದ್-ಗಂಗಾ ನದಿಯಿಂದ ಡೈವರ್ಟ್ ಕೆನಾಲ್ ಮೂಲಕ ವೇದಗಂಗಾ ನದಿ ಮೂಲಕ ಚಿಕ್ಲಿ ಡ್ಯಾಮ್‌ಗೆ ನೀರು ಹೋಗಿ ನಿಲ್ಲುತ್ತದೆ. ಆ ಡ್ಯಾಮ್ ತುಂಬಿದ ಮೇಲೆ ಈ ಡೈವರ್ಟ್ ಕೆನಾಲ್ ಅನ್ನು ಬಂದ್ ಮಾಡುತ್ತಾರೆ. ಇದರಿಂದಾಗಿ ವೇದಗಂಗಾ ನದಿಗೆ ಬರತಕ್ಕಂಥ ನೀರು ನಿಂತು ಹೋಗಿಬಿಡುತ್ತದೆ. ಈ ವೇದಗಂಗಾ ನದಿಗೆ ಬರತಕ್ಕಂಥ ನೀರು ನಿಂತುಹೋದರೆ, ಅದರ ಅಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕಂಥ ಸುಮಾರು 32 ಹಳ್ಳಿಗಳು ಹಾಗೂ ಪಟ್ಟಣಗಳಾದ ನಿಪ್ಪಾಣಿ, ಚಿಕ್ಲಿಯಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ ಮತ್ತು ಅಲ್ಲಿರತಕ್ಕಂಥ ದನಕರುಗಳಿಗೂ ಕುಡಿಯಲು ನೀರು ಸಿಗುವುದಿಲ್ಲ. ಮಹಾರಾಷ್ಟ್ರ ವಾಟರ್ ಬೋರ್ಡ್‌ನವರಿಗೆ ಒಂದು ಕೋಟಿ 70 ಲಕ್ಷ ರೂಪಾಯಿಗಳನ್ನು ಇನ್ನು 10 ದಿವಸಗಳೊಳಗೆ ಕೊಟ್ಟರೆ ಅವರು ನೀರನ್ನು ಬಿಡುತ್ತಾರೆ. ಇಲ್ಲದೇ ಹೋದರೆ ದೂದ್‌ಗಂಗಾ ನದಿಯಿಂದ ವೇದಗಂಗಾ ನದಿಗೆ ನೀರು ಬಿಡತಕ್ಕಂಥ ಡೈವರ್ಟ್ ಕೆನಾಲ್ ಅನ್ನು ಬಂದ್ ಮಾಡಿಬಿಡುತ್ತಾರೆ. ಆದುದರಿಂದ, ಮಹಾರಾಷ್ಟ್ರ ಸರ್ಕಾರದೊಡನೆ ಈ ಬಗ್ಗೆ ನಮ್ಮ ಸರ್ಕಾರದವರು ಮಾತನಾಡಿ ಇನ್ನು 10 ದಿವಸಗಳ ಒಳಗೆ ಕೊಡಬೇಕಾದ ಒಂದು ಕೋಟಿ 70 ಲಕ್ಷ ರೂಪಾಯಿಗಳನ್ನು ಕೊಟ್ಟು ನೀರು ಬಿಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ಪಕ್ಷ ಒಂದು ಕೋಟಿ 70 ಲಕ್ಷ ರೂಪಾಯಿಗಳನ್ನು ತಕ್ಷಣದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಕನಿಷ್ಠಪಕ್ಷ 70 ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಅಥವಾ ಹಣವನ್ನು ಕೊಡುವ ಬಗ್ಗೆ ಕರ್ನಾಟಕ ಸರ್ಕಾರದವರು ಒಂದು ಒಪ್ಪಂದ ಮಾಡಿಕೊಂಡರೆ ನಾವು ನೀರು ಬಿಡುತ್ತೇವೆ ಎನ್ನತಕ್ಕಂಥ ಮಾತನ್ನು ಮಹಾರಾಷ್ಟ್ರ ವಾಟರ್ ಬೋರ್ಡ್‌ನವರು ನಮಗೆ ಹೇಳಿದ್ದಾರೆ. ಪದೇ ಪದೇ ಇಂಥಾ ಸಮಸ್ಯೆ ಬರದೇ ಇರುವ

ಹಾಗೆ, ಅಂದರೆ ದೂದ್-ಗಂಗಾ ನದಿಯಿಂದ ವೇದಗಂಗಾ ನದಿಗೆ ಚಿಕ್ಲಿ ಡ್ಯಾಮ್‌ನಿಂದ ವರ್ಷದ 12 ತಿಂಗಳುಗಳೂ ನೀರು ಹರಿಯುವ ಹಾಗೆ ಒಂದು ಒಪ್ಪಂದವನ್ನು ಮಹಾರಾಷ್ಟ್ರ ಸರ್ಕಾರದೊಡನೆ ನಮ್ಮ ಸರ್ಕಾರ ಮಾಡಿಕೊಳ್ಳುವುದು ಒಳ್ಳೆಯದು. ಆದರೆ, ಅಂಥಾ ಒಪ್ಪಂದವನ್ನು ಇದುವರೆಗೆ ಮಾಡಿಕೊಂಡಿಲ್ಲ. ಇನ್ನು ಮುಂದಾದರೂ ಇಂಥ ಒಂದು ಒಪ್ಪಂದವನ್ನು ಮಾಡಿಕೊಂಡರೆ ನಮ್ಮ ಭಾಗದ ಪ್ರದೇಶಗಳಿಗೆ ಅನುಕೂಲವಾಗುತ್ತದೆಂದು ಈ ಮೂಲಕ ಮಾನ್ಯ ಮಂತ್ರಿಯವರಲ್ಲಿ ತಿಳಿಸುತ್ತೇನೆ.

ಶ್ರೀ ಜೋಷಿ ಸುಭಾಷ್ ಶ್ರೀಧರ್ (ನಿಪ್ಪಾಣಿ): ಮಾನ್ಯ ಉಪ ಸಭಾಧ್ಯಕ್ಷರೆ, ಈ ವಿಷಯದ ಬಗ್ಗೆ ಮಾನ್ಯ ನೀರಾವರಿ ಸಚಿವರು ನೇರವಾಗಿ ಹೇಳಬೇಕು. 1996ರಲ್ಲಿ ಲಿಖಿತ ಮೂಲಕ ಏನು ಹೇಳಿದ್ದಾರೆಂದರೆ:

"Please take up this matter with the Maharashtra Government. Meanwhile send letters to Maharashtra to release water to Vedaganga" ಇದು ಹೇಳಿರುವಂಥಾದ್ದು 1996ಕ್ಕೆ. ಇವತ್ತು 1998, ಈಗ ನೀರು ಬಿಡಲಿಲ್ಲವೆಂದರೆ ಅಲ್ಲಿನ 32 ಹಳ್ಳಿಗಳು ಹಾಗೂ ನಿಪ್ಪಾಣಿ ಟೌನ್‌ನವರು they are facing a crucial situation. He has to send a Fax message today itself. ಇವತ್ತು, ಇದರ ಬಗ್ಗೆ ಫ್ಯಾಕ್ಸ್ ಹೋಗಲಿಲ್ಲವೆಂದರೆ, ಅವರು ನೀರು ಬಂದ್ ಮಾಡುತ್ತಾರೆ. ಏನು ಫ್ಯಾಕ್ಸ್ ಹೋಗಬೇಕು?

"We are ready to pay the remaining amount. Please release water to Vedaganga river immediately. We will pay Rs. 50 lakhs or 1 crore before 31st March" ಎಂದು ಈ ರೀತಿ ಫ್ಯಾಕ್ಟ್ ಕೊಟ್ಟರೆ, ಅವರು ನೀರನ್ನು ರಿಲೀಸ್ ಮಾಡುತ್ತಾರೆ. ಇಲ್ಲವೆಂದರೆ ನೀರನ್ನು ರಿಲೀಸ್ ಮಾಡುವುದಿಲ್ಲ. ಆದುದರಿಂದ ಇದರ ಬಗ್ಗೆ ನೇರವಾಗಿ ಉತ್ತರ ಕೊಡದೇ ಇದ್ದರೆ, ನಮಗೆ ಬೇರೆ ದಾರಿ ಇಲ್ಲದೆ ಸದನದಲ್ಲಿ ಧರಣಿ ಮಾಡಬೇಕಾಗುತ್ತದೆ.

+ ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ದೂದ್‌ಗಂಗಾ ನದಿಯಿಂದ ವೇದಗಂಗಾ ನದಿಗೆ ಚಿಕ್ಲಿ ಹೊಳೆ ಡ್ಯಾಮ್ ಮುಖಾಂತರ ನೀರನ್ನು ಬಿಡಿಸಿಕೊಟ್ಟು 32 ಹಳ್ಳಿಗಳಲ್ಲಿ ಬೆಳೆದಿರತಕ್ಕಂಥ ಬೆಳೆಯನ್ನು ರಕ್ಷಣೆ ಮಾಡಬೇಕೆಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಬಚಾವತ್ ಅವಾರ್ಡ್ ಪ್ರಕಾರ ದೂದಗಂಗಾ ನದಿ ನೀರಿನಲ್ಲಿ 4 ಟಿ.ಎಂ.ಸಿ. ಎಫ್.ಟಿ., ಯಷ್ಟು ನೀರನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದೆ. ಈ ಸಂಬಂಧವಾಗಿ ದೂದ್‌ಗಂಗಾ ಯೋಜನೆಗೆ ನಮ್ಮ ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರಕ್ಕೆ 28 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಅದರಲ್ಲಿ ಇದುವರೆಗೆ 3 ಕೋಟಿ ಅಥವಾ 4 ಕೋಟಿ

ರೂಪಾಯಿಗಳನ್ನು ಮಾತ್ರ ಕೊಡಲಾಗಿದೆ. ಈ ಹಣ ಕೊಡುವ ವಿಷಯದಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ಮಧ್ಯೆ ಒಂದು ಅಗ್ರಿಮೆಂಟ್ ಆಗಬೇಕಾಗಿದೆ. ಈ ಅಗ್ರಿಮೆಂಟ್‌ನ ಪ್ರಿಲಿಮಿನರಿ ಡ್ರಾಫ್ಟ್‌ನ್ನು ಎರಡೂ ಸರ್ಕಾರದವರು ನೋಡಲಾಗಿದೆ ಹಾಗೂ ಅಗ್ರಿಮೆಂಟ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅದನ್ನು ಮಹಾರಾಷ್ಟ್ರ ಸರ್ಕಾರಕ್ಕೆ 6 ತಿಂಗಳ ಹಿಂದೆಯೇ ಕಳುಹಿಸಿಕೊಟ್ಟಿದ್ದೇವೆ. ಆದರೆ, ಅದು ಇನ್ನೂ ವಾಪಸ್ ಬಂದಿಲ್ಲ. ಈ ದೂ್ಗಂಗಾ ನದಿ ನೀರಿನ ವಿಚಾರದಲ್ಲಿ ಆದಷ್ಟು ಬೇಗ ಅಗ್ರಿಮೆಂಟ್ ಆಗಬೇಕೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಹಣವನ್ನು ಮೊದಲು ಕೊಡಿ ಎಂದು ಮಹಾರಾಷ್ಟ್ರದವರು ಕೇಳುತ್ತಿದ್ದಾರೆ. ಅಗ್ರಿಮೆಂಟ್ ಆದ ತಕ್ಷಣ ಹಣವನ್ನು ಕೊಡಲಾಗುತ್ತದೆಂದು ನಾವು ಹೇಳಿದ್ದೇವೆ. ಹಣವನ್ನು ಅವರಿಗೆ ಕೊಡುವುದರಲ್ಲಿ ಎರಡನೇ ಮಾತು ಇಲ್ಲ. ಈಗ ಮೂಲಭೂತವಾದ ವಿಷಯವೇನೆಂದರೆ, ತಾತ್ಕಾಲಿಕವಾಗಿ ದೂದ್‌ಗಂಗಾ ನದಿಯಿಂದ ವೇದಗಂಗಾ ನದಿಗೆ ನೀರು ಬಿಡಿಸುವ ವಿಷಯ ಆಗಿದೆ. ಆದರೆ, ವಾಟರ್ ರೇಟ್ ವಿಷಯದಲ್ಲಿ ಸ್ವಲ್ಪ ಡಿಫರೆನ್ಸ್ ಇದೆ. ವಾಟರ್ ರೇಟನ್ನು ಒಂದೂವರೆ ವರ್ಷದಲ್ಲಿ ಮೂರು ಪಟ್ಟಿನಷ್ಟು ಅವರು ಹೆಚ್ಚು ಮಾಡಿದ್ದಾರೆ. ಆ ರೇಟನ್ನು ಕಡಿಮೆ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಈಗ ಅವರಿಗೆ 1 ಕೋಟಿ 70 ಲಕ್ಷ ಹಣ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮುಖ್ಯ ಮಂತ್ರಿಗಳ ಕಛೇರಿಯಲ್ಲಿ ಲೆಟರ್ ರೆಡಿಯಾಗಿದೆ. ಲೆಟರ್ ಕಳುಹಿಸುವ ಮೊದಲು ಆ ರಾಜ್ಯದ ನೀರಾವರಿ ಸೆಕ್ರೆಟರಿಯವರು ಮತ್ತು ನಮ್ಮ ರಾಜ್ಯದ ನೀರಾವರಿ ಇಲಾಖೆ ಸೆಕ್ರೆಟರಿಯವರು ಮಾತನಾಡಿ ಎಷ್ಟು ಹಣವನ್ನು ಕಟ್ಟಬೇಕೆಂದು ನಿಗದಿ ಮಾಡಿ ಹಣವನ್ನು ಕಳುಹಿಸಲಾಗುತ್ತದೆ. ಇದರ ಜೊತೆಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದೂ ಸಹಾ ಒಂದು ಸೆಪರೇಟ್ ಫ್ಯಾಕ್ಸ್‌ನ್ನೂ ಕಳುಹಿಸಿಕೊಡಲಾಗುತ್ತದೆ. ಈ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಜೊತೆ, ಉಪ ಮುಖ್ಯಮಂತ್ರಿಗಳ ಜೊತೆ, ಆ ರಾಜ್ಯದ ನೀರಾವರಿ ಇಲಾಖೆ ಕಾರ್ಯದರ್ಶಿಗಳ ಜೊತೆ ನಾವು ಹಲವಾರು ಬಾರಿ ಚರ್ಚೆ ಮಾಡಿದ್ದೇವೆ. ಆದರೆ, ಇನ್ನೂ ಅಗ್ರಿಮೆಂಟ್ ಆಗಿಲ್ಲ. ಇನ್ನೂ ಒಂದು ಸಾರಿ ಈ ಬಗ್ಗೆ ಎರಡೂ ರಾಜ್ಯದ ಮುಖ್ಯ ಮಂತ್ರಿಗಳು ಮಾತನಾಡುವ ಹಾಗೆ ಏರ್ಪಾಡು ಮಾಡಲಾಗುತ್ತದೆ. ಅವರು ಮಾತನಾಡಲು ಸಿಕ್ಕಲಿಲ್ಲವೆಂದರೂ, ಕೂಡಲೇ ಫ್ಯಾಕ್ಸ್‌ನ್ನು ಕಳುಹಿಸಿ, ಆಗಸ್ಟ್ 31ನೇ ತಾರೀಖಿನೊಳಗೆ ಏನು ಹಣವನ್ನು ಕಟ್ಟಬೇಕೆಂದು ಹೇಳಿದ್ದಾರೋ ಅದನ್ನು ಕಟ್ಟಿಸಿ ವೇದಂಗಂಗಾ ನದಿಗೆ ನೀರು ಬರುವಂಥ ವ್ಯವಸ್ಥೆಯನ್ನು ಮಾಡಿ ಕರ್ನಾಟಕ ರೈತರ ಬೆಳೆಗಳನ್ನು ರಕ್ಷಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಎಸ್.ಸುಭಾಷ್ ಜೋಷಿ: ಇವತ್ತು ಫ್ಯಾಕ್ಸ್ ಹೋಗಲಿಲ್ಲವೆಂದರೆ, ಅವರು ನೀರು ಸ್ಟಾಪ್ ಮಾಡುತ್ತಾರೆ. ಅಗ್ರಿಮೆಂಟ್ ಬೇಕಾದರೆ ಆಮೇಲೆ ಆಗಲಿ.

SRI K.N.NAGEGOWDA: I will assure the hon'ble

member. Agreement is different and payment of amount is different. First part is to pay water rate. I will see that today or tomorrow or within a week; the amount is paid to Maharashtra Government to release water.

ಶ್ರೀ ಎಸ್.ಸುಭಾಷ್ ಜೋಷಿ: ಅಗ್ರಿಮೆಂಟ್ ಬೇಕಾದರೆ ಆಮೇಲೆ ಮಾಡಬಹುದು. ಮೊದಲು ಈ ಬಗ್ಗೆ ಫ್ಯಾಕ್ಸ್ ಕಳುಹಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಇದೇ ದಿವಸ 5 ಗಂಟೆಯೊಳಗಾಗಿ ಮಹಾರಾಷ್ಟ್ರ ಸರ್ಕಾರಕ್ಕೆ ಫ್ಯಾಕ್ಸ್ ಕಳುಹಿಸಿಕೊಡುತ್ತೇವೆ. ಅದರ ಕಾಪಿಯನ್ನು ತಮಗೂ ಒದಗಿಸಿಕೊಡುತ್ತೇನೆ.

ವಿಷಯ: ಮಂಡ್ಯ ತಾಲ್ಲೂಕಿನ ಕೂತ್ತತ್ತಿ ಹೋಬಳಿ ಚನ್ನಪ್ಪನ ದೊಡ್ಡಿ ಗ್ರಾಮದ ಶೈಲಜಾ ಎಂಬುವವರಿಗೆ ನ್ಯಾಯ ದೊರಕಿಸಿಕೊಡುವುದು.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಹೇಳುವ ವಿಷಯವನ್ನು ವಿಶೇಷವಾಗಿ ಮಹಿಳಾ ಶಾಸಕಿಯರು ಬಹಳ ಗಂಭೀರವಾಗಿ ಈ ವಿಚಾರದಲ್ಲಿ ಚಿಂತನೆ ಮಾಡಬೇಕು. ಈ ವಿಷಯವನ್ನು ಗಿನ್ನೀಸ್ ಬುಕ್‌ನಲ್ಲಿ ಬರೆದು ಇಡಬಹುದು. ಅದೇನೆಂದರೆ, ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿ, ಚನ್ನಪ್ಪನ ದೊಡ್ಡಿ ಗ್ರಾಮದಲ್ಲಿ, ಶೈಲಜಾ ಮತ್ತು ನಿಂಗೇಗೌಡ ಎನ್ನುವವರು ಸುಮಾರು 70 ದಿವಸಗಳ ಹಿಂದೆ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಪ್ರೀತಿಸತಕ್ಕಂಥ ಸಮಯದಲ್ಲಿ ಆ ಊರಿನ ಪ್ರಮುಖರ ಕೈಗೆ ಸಿಕ್ಕಿದರು, 9 ಜನರು ಈ ಬಗ್ಗೆ ನ್ಯಾಯ ಮಾಡಿ ಅವರಿಬ್ಬರಿಗೂ ಮದುವೆ ಮಾಡಬೇಕೆನ್ನುವ ತೀರ್ಮಾನಕ್ಕೆ ಬಂದರು. ಅವರ ಸೋದರ ಮಾವ ಕೆಂಪೇಗೌಡ ಎನ್ನುವವರು ಈ ತಕ್ಷಣದಲ್ಲಿ ಮದುವೆ ಮಾಡುವುದು ಬೇಡ, ನಮಗೆ ಕಾಲಾವಕಾಶ ಕೊಡಿ, ಸಾಂಪ್ರದಾಯಕ ರೀತಿಯಲ್ಲಿ ದೊಡ್ಡದಾಗಿ ಮದುವೆ ಮಾಡೋಣವೆಂದು ಆಶ್ವಾಸನೆ ಕೊಟ್ಟು ಒಪ್ಪಿಕೊಂಡು ಹೋದರು.

12.30 ಪಿ.ಎಂ

ಹೀಗೆ ಒಪ್ಪಿಕೊಂಡು ಹೋದಮೇಲೆ ಆ ಹುಡುಗ 70 ದಿವಸಗಳಿಂದ ಕಾಣೆಯಾಗಿದ್ದಾನೆ. ಆ ಕೆಂಪೇಗೌಡ ಎನ್ನತಕ್ಕಂಥವನು ಯಾವುದೇ ಕಾರಣಕ್ಕೂ ಆ ಹುಡುಗಿಗೆ ಮದುವೆ ಮಾಡಬಾರದು ಎಂದು ಹೇಳಿ 70 ದಿವಸಗಳಿಂದ ಆ ಹುಡುಗ ಪತ್ತೆ ಇಲ್ಲ. ಪೊಲೀಸ್ ಇಲಾಖೆ ಮತ್ತು ಎಲ್ಲಾ ಇಲಾಖೆಗಳಿಗೂ ಹಾಗೂ ಪತ್ರಿಕೆಯ ಮೂಲಕ ಗಂಭೀರವಾಗಿ ಜನರ ಗಮನವನ್ನು ಸೆಳೆಯತಕ್ಕಂಥ ಕೆಲಸವನ್ನು ಮಾಡಿ, ಎಲ್ಲಾ ಮಹಿಳಾ ಸಂಘಟನೆಗಳು ಜಿಲ್ಲಾಧಿಕಾರಿಯವರ ಮುಂದೆ ಧರಣಿ ಮಾಡಿದ್ದಾರೆ. ಮಾನ್ಯ ಜಿಲ್ಲಾ